ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 11/3/2021

# ಸಚಿವರ ಕೊರತೆ; ಕಲಾಪ ಮುಂದಕ್ಕೆ

11/3/21

- ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೊರತುಪಡಿಸಿ ಸದನದಲ್ಲಿ ಒಬ್ಬರೂ ಸಚಿವರು ಇರಲಿಲ್ಲ.
- ಸೋಮವಾರಕ್ಕೆ ಕಲಾಪ ಮುಂದೂಡಿದ್ದ ಸಭಾಪತಿ

ವಿಧಾನಪರಿಷತ್ತು: ಸದನದಲ್ಲಿ ಸಚಿವರ ಕೊರತೆ ಹಿನ್ನಲೆಯಲ್ಲಿ ಕಲಾಪವನ್ನು ಮುಂದೂಡಬೇಕಾದ ಪ್ರಸಂಗ ಬುಧವಾರ ಮೇಲ್ಮನೆಯಲ್ಲಿ ನಡೆಯಿತು.

ಭೋಜನ ವಿರಾಮದ ನಂತರ ಮಧ್ಯಾಹ್ನ 2.15ಕ್ಕೆ ಕಲಾಪ ಆರಂಭವಾದಾಗ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಬಜೆಟ್ ಮೇಲೆ ಭಾಷಣಕ್ಕೆ ಎದ್ದು ನಿಂತರು. ಆಗ, ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೊರತುಪಡಿಸಿ ಸದನದಲ್ಲಿ ಒಬ್ಬರೂ ಸಚಿವರು ಇಲ್ಲದಿರುವುದನ್ನು ಗಮನಿಸಿದ ಸಭಾಪತಿ, ಏನ್ರಿ ಸಭಾ ನಾಯಕರೇ ಸಚಿವರು ಇರಬೇಕೆಂದು ಎಷ್ಟು ಸಾರಿ ಹೇಳಬೇಕು. ಹೇಳಿ-ಹೇಳಿ ಬಾಯಿ ಮೊಂಡಾಗಿದೆ ಎಂದು ಬೇಸರಿಂದ ಹೇಳಿದರು.

ಈ ದಿನ ಸದನದಲ್ಲಿ ಕಡ್ಡಾಯವಾಗಿ ಸಚಿವರಾದ ಸಿ.ಸಿ. ಪಾಟೀಲ್, ಮುರಗೇಶ್ ನಿರಾಣಿ, ಎಂ.ಟಿ.ಬಿ ನಾಗರಾಜ್, ಕೆ. ಗೋಪಾಲಯ್ಯ, ಸಿ.ಪಿ. ಯೋಗೇಶ್ವರ್ ಇರಬೇಕಿತ್ತು. ಆದರೆ, ಒಬ್ಬರೂ ಇಲ್ಲ ಎಂದು ಸಭಾಪತಿ ಹೇಳಿದರು. ಸಚಿವರು, ಅಲ್ಲಿ-ಇಲ್ಲಿ ಸುತ್ತಾಡುತ್ತಿದ್ದಾರೆ ಎಂದು ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಸಮರ್ಥನೆ ನೀಡಿದರು. ಅಲ್ಲಿ-ಇಲ್ಲಿ ಸುತ್ತಾಡುವುದು ಎಂದರೆ ಬೇರೆ ಅರ್ಥ ಬರುತ್ತದೆ. ದಾರಿ ಬಿಟ್ಟವರು ಎಂದು ನಮ್ಮ ಕಡೆ ಹೇಳುತ್ತಾರೆ. ಮೊದಲೇ ಸಿಡಿ ಗಲಾಟೆ ನಡೆದಿದೆ, ಇಂತಹ ಸಂದರ್ಭದಲ್ಲಿ ಸಭಾನಾಯಕರು ಹೀಗೆ ಹೇಳಿದರೆ ನಾವು ಏನೆಂದು ತಿಳಿಯಬೇಕು ಎಂದು ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್ ಕೆಣಕಿದರು.

ಸಚಿವರು ವಿಧಾನಸಭೆ-ವಿಧಾನಪರಿಷತ್ತು ನಡುವೆ ಸುತ್ತಾಡುತ್ತಿದ್ದಾರೆ ಎಂಬ ಅರ್ಥದಲ್ಲಿ ನಾನು ಹೇಳಿದ್ದೇನೆ ಎಂದು ಕೋಟ ಶ್ರೀನಿವಾಸ ಪೂಜಾರಿ ಸ್ಪಷ್ಟನೆ ನೀಡಿದರು. ವಿಧಾನಸಭೆ ಮುಂದೂಡಲ್ಪಟ್ಟಿದೆ, ಸಚಿವರು ಯಾಕೆ ಅಲ್ಲಿಗೆ ಹೋಗುತ್ತಾರೆ ಎಂದು ಸಭಾಪತಿ ಪ್ರಶ್ನಿಸಿದರು. ಇಲ್ಲ ಸಚಿವ ಆರ್. ಶಂಕರ್ ಮನೆಗೆ ಕೆಲವರು ಊಟಕ್ಕೆ ಹೋಗಿದ್ದಾರೆ. ಬರಲು 10-15 ನಿಮಿಷ ಆಗಬಹುದು ಎಂದು ಸಭಾನಾಯಕರು ಹೇಳಿದರು. ಹಾಗಿದ್ದರೆ, ಸದನ 10 ನಿಮಿಷ ಮುಂದೂಡುತ್ತೇನೆ. ಸಚಿವರನ್ನು ಕರೆಸಿ, ಚರ್ಚೆ ಆರಂಭಿಸೋಣ. ಇಲ್ಲವೇ ಸೋಮವಾರಕ್ಕೆ ಕಲಾಪ ಮುಂದಕ್ಕೆ ಹಾಕೋಣ ಎಂದು ಸಭಾಪತಿ ಹೇಳಿದರು. ಸಚಿವರನ್ನು ಕರೆಸಬಹುದು. ಆದರೆ, ಎರಡು ಕಡೆ ಸದಸ್ಯರ ಸಂಖ್ಯೆ ಕಡಿಮೆ ಇದೆ, ನೀವೆ ತೀರ್ಮಾನಿಸಿ ಎಂದು ಸಭಾನಾಯಕ ಹೇಳಿದರು.

ಸೋಮವಾರ ಮುಂದಕ್ಕೆ ಹಾಕುವುದಾದರೆ ಕಾರಣ ಹೇಳಿ ಮುಂದೂಡಿ ಎಂದು ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್ ಆಗ್ರಹಿಸಿದರು. ಗುರುವಾರ ಶಿವರಾತ್ರಿ ರಜೆ, ಅನೇಕರು ತಮ್ಮ ಊರುಗಳಿಗೆ ಹೋಗಿದ್ದಾರೆ. ಸದನ ಮುಂದೂಡಿ ಎಂದು ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರು ಮನವಿ ಮಾಡಿದರು. ಸಚಿವರ ಕೊರತೆ ಹಿನ್ನೆಲೆಯಲ್ಲಿ ಸದನವನ್ನು ಸೋಮವಾರ ಬೆಳಿಗ್ಗೆ 10 ಗಂಟೆಗೆ ಮುಂದೂಡಲಾಗಿದೆ ಎಂದು ಸಭಾಪತಿ ಹೇಳಿದರು.